# ಧರೆ ಹತ್ತಿ ಉರಿದೊಡೆ!

1956ರಲ್ಲಿ ಆಗಿನ ಪ್ರಧಾನಿಯ ದಿನವೊಂದರ ವೆಚ್ಚ ಸುಮಾರು 25000 ರೂಪಾಯಿಗಳಷ್ಟಿತ್ತು. ಆ ಕಾಲಕ್ಕೆ ಆ ವೆಚ್ಚ ಅತ್ಯಂತ ದುಬಾರಿಯದಾಗಿತ್ತು. ರಾಮನೋಹರ ಲೋಹಿಯಾ ಅವರು, ಪ್ರಧಾನಿಯವರ ಭದ್ರತೆಗೆ ಬೇಕಾದದ್ದು ಎಷ್ಟು? ಆಡಂಬರಕ್ಕೆ ಎಷ್ಟು? ವೈಭವಕ್ಕೆ ಎಷ್ಟು? ಇದು ದುಬಾರಿಯಾದದ್ದು ಮತ್ತು ಸಂಪೂರ್ಣ ಅನುಚಿತವಾದದ್ದು ಎಂದು ಸಾರ್ವಜನಿಕವಾಗಿ ಗಂಭೀರ ನೆಲೆಯಲ್ಲಿ ಪ್ರಶ್ನಿಸಿದ್ದರು. ಹಾಗೆಯೇ ನೆಹರೂ ಅವರನ್ನು ಲೋಹಿಯಾ ಭಾರತದ 'ಬಹಳ ದುಬಾರಿ ಪ್ರಧಾನಿ' ಎಂದು ಟೀಕಿಸಿದ್ದರು. ಆಗಿನ ಪ್ರಧಾನಿ ನೆಹರೂ ಕೂಡ ಈ ಪ್ರಶ್ನೆಗೆ ಸಭ್ಯತೆಯಿಂದಲೇ ಉತ್ತರಿಸಿದ್ದರು. ಹೀಗೆ ಒಬ್ಬ ಪ್ರಧಾನಿಯನ್ನು ಸಾರ್ವಜನಿಕವಾಗಿ ಪ್ರಶ್ನಿಸುವ ಅಧಿಕಾರವನ್ನು ಲೋಹಿಯಾ ನೈತಿಕವಾಗಿ ಉಳಿಸಿಕೊಂಡಿದ್ದರು. ಭಾರತದಂತಹ ಬಡದೇಶದಲ್ಲಿ ರಕ್ಷಣೆ ಹಾಗೂ ಆಡಂಬರಕ್ಕಾಗಿ ಜನತೆಯ ತೆರಿಗೆ ಹಣವನ್ನು ಪೋಲು ಮಾಡುವುದನ್ನು ಮಹಾತ್ಮ ಗಾಂಧಿ ಕೂಡ ಅಂದೇ ವಿರೋಧಿಸಿದ್ದರು!

ಇದು ಗತದ ಮಾತಾದರೂ ಇಂದಿಗೂ ಹೆಚ್ಚು ಪ್ರಸ್ತುತವಾದದ್ದು. ಇಂದು ನಮ್ಮ ನಡುವೆ, ಜನರ ತೆರಿಗೆ ಹಣವನ್ನು ಆಡಂಬರಕ್ಕಾಗಿ, ಭದ್ರತೆಗಾಗಿ ಪೋಲು ಮಾಡುತ್ತಿರುವ ಜನಪ್ರತಿನಿಧಿಗಳನ್ನು ಹೀಗೆ ಸಾರ್ವಜನಿಕವಾಗಿ ಪ್ರಶ್ನಿಸುವ ನೈತಿಕತೆವುಳ್ಳ ರಾಜಕಾರಣಿಗಳು ನಮ್ಮ ನಡುವೆ ಈಗಲೂ ಇದ್ದಾರೆಯೆ? ಭಾರತದಲ್ಲಿ ನೀವು ಇಂದು ಯಾರನ್ನು ಕೇಳಿದರೂ ಹಿಂದು ಮುಂದು ಯೋಚಿಸದೆ ಬಹು ಸಲೀಸಾಗಿ ಇಲ್ಲ ಎಂದೇ ಹೇಳಿಯಾರು! ಇಷ್ಟರಮಟ್ಟಿಗೆ ನಮ್ಮ ಕಾಲದ ರಾಜಕಾರಣಿಗಳ ಸಂಪತ್ತು ನೂರಾರು ಪಟ್ಟು ದ್ವಿಗುಣಗೊಂಡಿದೆ. ಇದರ ಜೊತೆಗೆ ಅವರ ನೈತಿಕತೆಯ ಸೂಚ್ಯಂಕ ಪ್ರಪಾತಕ್ಕೆ ಕುಸಿದಿದೆ. ಅಂಕಿ–ಅಂಶಗಳ ಮೂಲಕ ಹೇಳುವುದಾದರೆ, 18ನೇ ಲೋಕಸಭೆಯಲ್ಲಿರುವ ಸುಮಾರು ನೂರಕ್ಕೂ ಹೆಚ್ಚು ಜನ ಸಾವಿರದಿಂದ ನೂರಾರು ಕೋಟಿ ಸಂಪತ್ತುಳ್ಳವರಾಗಿದ್ದಾರೆ! ಹೀಗಿರುವಾಗ ಬಡವರ ಹಾಗೂ ಅಂಚಿನಲ್ಲಿರುವ ಸಮುದಾಯದವರ ದಿನನಿತ್ಯದ ಬದುಕು, ಆರೋಗ್ಯ, ಉದ್ಯೋಗ, ಶಿಕ್ಷಣದ ಬಗ್ಗೆ ಆದ್ಯತೆ ಕೊಟ್ಟು ಚರ್ಚಿಸಲು ಮುಂದಾಗದ ನಮ್ಮ ಸಂಸತ್ತು ಜನಸಾಮಾನ್ಯರ ಕಣ್ಣಿನಲ್ಲಿ ವಿರೂಪಗೊಂಡಿದೆ.

ದಿನವೊಂದಕ್ಕೆ ಕೇವಲ 100–150 ರೂಪಾಯಿಗೆ ದುಡಿಯುವ ಲಕ್ಷಾಂತರ ನಿರ್ಗತಿಕ ಕುಟುಂಬಗಳಿವೆ. ಇದರ ವಿರುದ್ಧ ದಿಕ್ಕಿನಲ್ಲಿ ವರ್ಷವೊಂದಕ್ಕೆ 44 ಕೋಟಿಯಿಂದ, 9.5 ಕೋಟಿವರೆಗೂ ಸಂಬಳ ಪಡೆಯುವ ಉದ್ಯಮಪತಿಗಳಿದ್ದಾರೆ! ಇಂತಹವರ ಕೈಯಲ್ಲಿ ಕೇವಲ ಸಂಪತ್ತು ಮಾತ್ರ ಇಲ್ಲ! ದೇಶದ ದಿಕ್ಕು ದೆಸೆಗಳನ್ನು ನಿರ್ಧರಿಸುವ ಸರ್ಕಾರದ ಯೋಜನೆಗಳು, ಆರ್ಥಿಕ ನೀತಿಗಳೂ ಇವೆ. ಇವೆಲ್ಲವೂ ಇಂದು ಹೇಳುತ್ತಿರುವುದು ಒಂದೇ ಸಂಕಥನವನ್ನು. ಏನೆಂದರೆ, ಭಾರತದಲ್ಲಿಂದ ಸಂಪತ್ತು, ಶಿಕ್ಷಣ, ಜೀವನಶೈಲಿ, ಉದ್ಯೋಗ ಮುಂತಾದ ಕ್ಷೇತ್ರಗಳಲ್ಲಿ ಬಡವರು ಮತ್ತು ಶ್ರೀಮಂತರ ನಡುವಿನ ಅಂತರ ಅಪಾಯಕಾರಿ ಮಟ್ಟವನ್ನು ಮುಟ್ಟಿದೆ ಎಂದು. ನೈತಿಕವಾಗಿ ತಳಕಚ್ಚಿದ ಇಂತಹ ಸಮಾಜವನ್ನು ಕಂಡೆ ಬಸವಣ್ಣ ಹೇಳಿದ. 'ಒಲೆ ಹತ್ತಿ ಉರಿದರೆ ನಿಲಬಹುದಲ್ಲದೆ, ಧರೆ ಹತ್ತಿ ಉರಿದೊಡೆ ನಿಲಬಹುದೆ!' ನಾಗರಿಕರು ಇಂತಹ ಅರಿವುಗೇಡಿ ರಾಜಕಾರಣಿಗಳನ್ನು ಕಾಲ ಕಾಲಕ್ಕೆ ಸಾರ್ವಜನಿಕವಾಗಿ ಪ್ರಶ್ನಿಸಿದ್ದರೆ ಇಂತಹ ವೈರುಧ್ಯಗಳನ್ನು ಕಾಣುವ ದೌರ್ಭಾಗ್ಯ ಸಮಾಜದ ಪಾಲಿಗೆ ಬರುತ್ತಿರಲಿಲ್ಲ!

ಹೀಗಾಗಿ ಲೋಹಿಯಾ ಅವರು ಅಂದು ಎತ್ತಿದ ಈ ಪ್ರಶ್ನೆ ಕೇವಲ ಒಬ್ಬ ಪ್ರಧಾನ ಮಂತ್ರಿಯ ಬಗ್ಗೆ ಮಾತ್ರ ಸೀಮಿತವಾಗಿಲ್ಲ! ಇಂದು ಈ ಪ್ರಶ್ನೆಯನ್ನು ವರ್ತಮಾನಕ್ಕೆ ಹೊರಳಿಸಿಕೊಂಡರೆ, ಬಹುಪಾಲು ನಮ್ಮನ್ನು ಪ್ರತಿನಿಧಿಸುವ ಎಲ್ಲ ರಾಜಕಾರಣಿಗಳನ್ನು ಕೇಳಬಹುದಾದ ಪ್ರಶ್ನೆಯಾಗಿದೆ. ದ್ವೇಷ, ಹಟಮಾರಿತನ, ಮೌಢ್ಯ ಹಾಗೂ ಬಹುಸಂಖ್ಯಾತರ ಎದೆಯಲ್ಲಿ ಹೆಪ್ಪುಗಟ್ಟಿರುವ ಮೂಕ ಮಾತುಗಳಿಗೆ ಧ್ವನಿಯಾಗದ ಜನಪ್ರತಿನಿಧಿ ನಿಸ್ಸಂದೇಹವಾಗಿ ನಿರಂಕುಶ ರಾಜಕಾರಣಿ ಎನಿಸಿಕೊಳ್ಳುತ್ತಾನೆ. ಇಂತಹ ಅಹಿತ ಗುಣಗಳನ್ನು ತೊರೆದವನು ನಿಜವಾದ ಅರ್ಥದಲ್ಲಿ ಪ್ರಜಾಪ್ರಭುತ್ವವಾದಿಯಾಗಿರುತ್ತಾನೆ. ಗಾಂಧೀ ತತ್ವಗಳಿಂದ ಪ್ರೇರೇಪಿತರಾಗಿದ್ದ ರಾಮಮನೋಹರ ಲೋಹಿಯಾ ಅವರಂತಹ ಸ್ವಾತಂತ್ರ್ಯಾನಂತರದ ಮೊದಲ ತಲೆಮಾರಿನ ಕೆಲವು ರಾಜಕಾರಣಿಗಳು ಉದಾರವಾದಿ ಸಾಮಾಜಿಕ ಪರಿವರ್ತನೆಯ ಸೊಡರನ್ನು ಬಿರುಗಾಳಿಯ ನಡುವೆಯೂ ಆರದಂತೆ ಕಾಪಾಡಿಕೊಂಡು, ಜೊತೆಗೆ ನಿರ್ಭೀತಿಯಿಂದ ಪ್ರತಿರೋಧಿಸುವ ಗುಣವನ್ನೂ ಇಟ್ಟುಕೊಂಡು ಜನತೆಯ ಕಣ್ಣಿನಲ್ಲಿ ಆದರ್ಶಪ್ರಾಯರಾಗಿದ್ದರು. ಆದರೆ ಈ ಆದರ್ಶದ ಸೊಡರು ಈಗ ನಿಧಾನವಾಗಿ ಕ್ಷಯಿಸುತ್ತಿದೆ! ಗುರಿ ಮತ್ತು ದಾರಿ ಪರಸ್ಪರ ವಿರುದ್ಧ ದಿಕ್ಕಿನವು ಎಂದು ಭಾವಿಸಿರುವ ವಿದೂಷಕರ ನಡುವೆ ಭಾರತದ ಭವಿಷ್ಯ ಹುಚ್ಚರು ಆಡುತ್ತಿರುವ ಚದುರಂಗದಾಟದಂತಾಗಿದೆ! ಇಂತಹವರನ್ನು ಕುರಿತೇ ಲೋಹಿಯಾ, ರಾತ್ರಿಯಲ್ಲಿ ಸುಳಿದಾಡುವ ಕಾಡುಪ್ರಾಣಿಗಳೆಂದೂ, 'ಜನತೆಯ ಶತ್ರು'ಗಳೆಂದು ಕರೆದಿದ್ದರು. ಇಂತಹ ನೈರಾಶ್ಯದ ದಿನಗಳಲ್ಲೂ ಕವಿವಾಣಿಯೊಂದು ಎಚ್ಚರಿಸುತ್ತಿದೆ 'ಆರದಿರು, ಆರದಿರು ಓ ನನ್ನ ಬೆಳಕೆ! ತಾರದಿರು ಕಾರಿರುಳ ಎನ್ನ ಹೃದಯಮಂದಿರಕೆ'.

ಭಾರತದ ಇಂದಿನ ರಾಜಕಾರಣದಲ್ಲಿ ಎದ್ದು ಕಾಣುವ ದೊಡ್ಡ ಗೈರುಹಾಜರಿ ಅಂದರೆ ಭಿನ್ನಮತ ಸಹಿಸಿಕೊಳ್ಳುವ, ಮತ, ಧರ್ಮಗಳಾಚೆಗೆ ಎಲ್ಲರನ್ನೂ ಒಳಗೊಳ್ಳುವ 'ಧರ್ಮ ಮೇಘ'ದಂತಹ ಗುಣ. ತನ್ನ ನಿಲುವು, ಅಭಿಪ್ರಾಯಗಳನ್ನು ಒಪ್ಪದೆ ಇರುವವರನ್ನು ಶತ್ರುಗಳ ಸಾಲಿನಲ್ಲಿ ನಿಲ್ಲಿಸುವ ಅಹಂಕಾರವೇ ಯಥೇಚ್ಛವಾಗಿ ತುಂಬಿತುಳುಕುತ್ತಿದೆ. ಇಂತಹ ಕುರುಡು ದ್ವೇಷ ನವೀನತೆಯ ವೈರಿ. ಕುರುಡನೇ ದಾರಿ ತೋರುವಂತನಾದರೆ ನಮ್ಮ ನಡಿಗೆ ಪ್ರಪಾತದ ಕಡೆಗೆ ಎನ್ನುವುದನ್ನು ಬಿಡಿಸಿ ಹೇಳಬೇಕಾಗಿಲ್ಲ! ಇಂತಹ ಸಮಯದಲ್ಲಿ 'ಭಿನ್ನವಾದ ವ್ಯಕ್ತಿಗಳೂ ಶಕ್ತಿಗಳೂ ಈ ಪ್ರಪಂಚದಲ್ಲಿವೆ ಎಂಬ ಸತ್ಯದ ಅರಿವೂ ಅತ್ಯಗತ್ಯ. ಈ ಅರಿವಿನಿಂದ ವಿನಯ ಹುಟ್ಟುತ್ತದೆ. ಅಂಥ ವಿನಯದಿಂದ ಇನ್ನೊಬ್ಬರ ಬಗ್ಗೆ ಗೌರವ ಅಥವಾ ಕೊನೆಯ ಪಕ್ಷ ಸಹಿಷ್ಣುತೆ ಹುಟ್ಟುತ್ತದೆ. ಆತ್ಮಗೌರವ ವಿನಯಗಳ ಸಮತೂಕ ಬೆಳವಣಿಗೆಯಿಂದ ನ್ಯಾಯನಿಷ್ಠರಾದ ಸಜ್ಜನರ ಸೃಷ್ಟಿಯಾಗುತ್ತದೆ. ಆದ ಕಾರಣವೇ ನಾವು ನಮಗಿಂತ ಭಿನ್ನವಾದ ಅಭಿಪ್ರಾಯಗಳುಳ್ಳವರನ್ನು ತಾಳಿಕೊಂಡು ಅದರ ಜೊತೆಗೇ ಬದುಕುವುದನ್ನು ಕಲಿಯಬೇಕು. ಇದು ರಾಜಕೀಯವಾಗಿ ವಿರೋಧ ಪಕ್ಷಗಳ ಬಗ್ಗೆ ಭ್ರಾತೃಭಾವನೆಯಾಗಿ ರೂಪುಗೊಳ್ಳುತ್ತದೆ; ಸಾಮಾಜಿಕವಾಗಿ ಸಮಷ್ಟಿಯ ಅಭ್ಯುದಯ ಚಿಂತನೆಯಾಗಿಯೂ ಪರಸ್ಪರ ಸಹಕಾರವಾಗಿಯೂ ವ್ಯಕ್ತವಾಗುತ್ತದೆ' (ಗೋಪಾಲಕೃಷ್ಣ ಅಡಿಗ) ಈ ಮಾತುಗಳು ಇಂದಿನ ರಾಜಕಾರಣಕ್ಕೆ ಸೂಕ್ತ ದಾರಿ ತೋರಬಲ್ಲದೇನೊ!

■ **ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ವಿದ್ಯೆಯೊಂದಿಗೆ ಆದರ್ಶ ಗುಣಗಳು ನಿನ್ನಲ್ಲಿ ಬರದಿದ್ದರೆ ನೀನು ಓದಿದ್ದು ವ್ಯರ್ಥ.
  —ಪ್ರೇಮಚಂದ
- ಪರಾನುಕರಣೆಯ ಪರಮಾನ್ನಕ್ಕಿಂತ ಸ್ವಸಾಧನೆಯ ಸಾರನ್ನ ಸ್ವಾದಿಷ್ಟ.
  —ಕೆ.ಎಸ್. ನಿಸಾರ್ ಅಹಮದ್
- ನಿನ್ನಂತೆ ನೀನಾಗು ನಿನ್ನ ನೀ ಅರಿ ಮೊದಲು/ ಚೆನ್ನೆಂದು ದೊಡ್ಡವರ ಅನುಕರಿಸ ಬೇಡ/ ಏನಾಯ್ತು ಮರಿಕತ್ತೆ? ಚೆಲುವಿತ್ತು, ಮುದ್ದಿತ್ತು /ತನ್ನಪ್ಪನಂತಾಗಿ ಹಾಳಾಯ್ತೊ ತಿಂಮ.
  —ಬೀಚಿ
- ಪ್ರಾಣಿ ಜೀವನ ಮಿತವಾದದು, ಮನುಷ್ಯ ಜೀವನ ಬಹುಮುಖವಾದದು.
  —ಶಿವರಾಮ ಕಾರಂತ
- ಸತ್ಯಕ್ಕೆ ಹೆದರುವವನು ಅಥವಾ ನಾಚುವವನು ನಿಜವಾದ ಜಿಜ್ಞಾಸುವಾಗಲಾರನು.
  —ಕುವೆಂಪು
- ಕರ್ತವ್ಯವನ್ನು ಕುರಿತು ಮೊದಲು ಯೋಚನೆ ಮಾಡಿ; ಹಕ್ಕುಗಳು ಆಮೇಲೆ ಬರಲಿ.
  —ಡಿವಿಜಿ
- ರೂಪ ಕಣ್ಣುಗಳಿಗೆ ಸೀಮಿತ, ಗುಣ ಆತ್ಮದವರೆಗೆ ತಲುಪುವ ಸಾಧನ.
  —ತ್ರಿವೇಣಿ